# ಹೊಸತು

## ಮೈಕ್ರೋಸಾಫ್ಟ್ ಲುಮಿಯಾ 535

ನೋಕಿಯಾವನ್ನು ಸಂಪೂರ್ಣವಾಗಿ ತನ್ನ ತೆಕ್ಕೆಗೆ ತೆಗೆದುಕೊಂಡ ಬಳಿಕ ಮೈಕ್ರೊಸಾಫ್ಟ್ ಲುಮಿಯಾ ಸರಣಿಯ ಹೊಸ ಫೋನ್ ಲುಮಿಯಾ 535 ಅನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿದೆ. 1 ಜಿಬಿ ರ್‍ಯಾಮ್, 8 ಜಿಬಿ ಮೆಮೊರಿ ಸಾಮರ್ಥ್ಯ ಮತ್ತು 5 ಇಂಚಿನ ಸ್ಪರ್ಶ ಸಂವೇದಿ ತೆರೆ ಹೊಂದಿದೆ. 5 ಮೆಗಾಪಿಕ್ಸೆಲ್ ಕ್ಯಾಮೆರಾ, ಎಲ್ಇಡಿ ಫ್ಲಾಶ್ ಮತ್ತು ಡುಯಲ್ ಸಿಮ್ ಸೌಲಭ್ಯ ಇದೆ.



ಬೆಲೆ : 9000 ರುಪಾಯಿ

ವಿವರಗಳಿಗೆ : www.microsoft.com

## ಡೈಮಂಡ್ ಡೇ ಕ್ರೀಮ್

ಟಿಬಿಸಿ ಬೈ ನ್ಯಾಚುರಲ್ ಇದೀಗ ತ್ವಚೆಯ ರಕ್ಷಣೆಗಾಗಿ ಡೈಮಂಡ್ ಡೇ ಕ್ರೀಮ್ ಅನ್ನು ಪರಿಚಯಿಸಿದೆ. ಎಲ್ಲಾ ವಿಧದ ತ್ವಚೆಗೂ ಇದು ಸೂಕ್ತವಾಗಿದ್ದು, ಧೂಳು ಮತ್ತು ಸೂರ್ಯನ ಕಿರಣಗಳಿಂದ ರಕ್ಷಿಸುತ್ತದೆ.




ತ್ವಚೆಯ ಬಗ್ಗೆ ಕಾಳಜಿ ವಹಿಸುವವರಿಗೆ ಇದು ಸೂಕ್ತ ಆಯ್ಕೆಯಾಗಿದ್ದು, ಉತ್ತಮ ಫಲಿತಾಂಶ ದೊರೆಯುತ್ತದೆ ಎಂದು ಕಂಪೆನಿ ಹೇಳಿದೆ.

50 ಗ್ರಾಮ್ ಪ್ಯಾಕ್ ಬೆಲೆ 395 ರೂಪಾಯಿ.

ವಿವರಗಳಿಗೆ: www.tbcbynature.tradeindia.com



## ಫೈವ್ ಕೇವ್ಸ್ ಸನ್‌ಗ್ಲಾಸ್

ಮಾಯ್ಜಿಮ್ ಇದೀಗ ನವೀನ ವಿನ್ಯಾಸದ ಫೈವ್ ಕೇವ್ಸ್ ಸರಣಿಯ ಸನ್‌ಗ್ಲಾಸ್ ಬಿಡುಗಡೆಗೊಳಿಸಿದೆ. ಕಣ್ಣಿನ ಆರೋಗ್ಯಕ್ಕೆ ಹೆಚ್ಚು ಸೂಕ್ತವೆನಿಸುವ ಪೇಟೆಂಟ್ ಹೊಂದಿದ ಲೆನ್ಸ್ ಇಲ್ಲಿ ಬಳಸಿದ್ದು, ಇದರಿಂದ ಕಣ್ಣಿಗೆ ಆರಾಮವೆನಿಸುತ್ತದೆ ಎಂದು ಕಂಪೆನಿ ಹೇಳಿದೆ. ಹಗುರವಾದ ಡಿಸೈನ್‌ನಿಂದಾಗಿ ಇದು ಗ್ರಾಹಕರ ಮನಸೆಳೆಯುತ್ತದೆ.

ಬೆಲೆ 13,000 ರೂಪಾಯಿ. ವಿವರಗಳಿಗೆ : www.mauijim.com

## ಲೆನೊವೊ ರಾಕ್‌ಸ್ಟಾರ್

ಸಂಗೀತ ಪ್ರಿಯರಿಗಾಗಿ ಲೆನೊವೊ ರಾಕ್‌ಸ್ಟಾರ್ ಎಂಬ ಸ್ಮಾರ್ಟ್ ಫೋನ್ ಅನ್ನು ಬಿಡುಗಡೆಗೊಳಿಸಿದೆ. 1.3 ಗಿಗಾ ಹರ್ಟ್ಸ್ ಪ್ರೊಸೆಸರ್, 4 ಜಿಬಿ ಮೆಮೊರಿ ಮತ್ತು 5 ಮೆಗಾಪಿಕ್ಸೆಲ್ ಕ್ಯಾಮೆರಾ ಇದರಲ್ಲಿದೆ. ಡ್ಯುಯಲ್ ಸಿಮ್ ಸೌಲಭ್ಯವಿದ್ದು, ಸಂಗೀತ ಕೇಳಲಿಕ್ಕಾಗಿಯೇ ಹಲವು ವಿಶೇಷ ಆ್ಯಪ್‌ಗಳನ್ನು ಈ ಫೋನ್ ಹೊಂದಿದೆ.



ಕಪ್ಪು, ಬಿಳಿ ಮತ್ತು ಕೆಂಪು ಬಣ್ಣಗಳಲ್ಲಿ ಇದು ದೊರೆಯುತ್ತಿದ್ದು, ಬೆಲೆ 6,499 ರೂಪಾಯಿ.

ವಿವರಗಳಿಗೆ: www.lenovo.com

## ಪಯೊನೀರ್ ಹೆಚ್‌ಡಿಜೆ 500

ಕಾರ್ ಆಡಿಯೋ ಮತ್ತು ಮ್ಯೂಸಿಕ್ ಸಿಸ್ಟಂ ತಯಾರಿಕ ಸಂಸ್ಥೆ ಪಯೊನೀರ್ ಆಕರ್ಷಕ ವಿನ್ಯಾಸದ ಹೆಡ್‌ಫೋನ್‌ಗಳನ್ನು ಮಾರುಕಟ್ಟೆಗೆ ಪರಿಚಯಿಸಿದೆ. ಹೆಚ್‌ಡಿಜೆ 500 ಎಂಬ ಮಾದರಿಯ ಈ ಹೆಡ್‌ಫೋನ್ ವೈಯಕ್ತಿಕ ಮತ್ತು ವಾಣಿಜ್ಯ ಬಳಕೆಗೆ ಸೂಕ್ತ. ಅತ್ಯುತ್ತಮ ಗುಣಮಟ್ಟದ ಆಡಿಯೋ ಇದರ ವಿಶೇಷ. 5 ವಿವಿಧ ಬಣ್ಣಗಳಲ್ಲಿ ಇದು ದೊರೆಯುತ್ತಿದ್ದು, ಬೆಲೆ 8590 ರೂಪಾಯಿ.

ವಿವರಗಳಿಗೆ : www.pioneerdj.com



## ಟೀ-ಎ-ಮೀ ಪ್ರೀಮಿಯಂ ಟೀ ಬ್ಯಾಗ್

ಮಧು ಜಯಂತಿ ಲಿ. ಚಹಾದ 17 ವಿಭಿನ್ನ ಮಾದರಿಗಳನ್ನು ಮಾರುಕಟ್ಟೆಗೆ ಪರಿಚಯಿಸಿದೆ. ಮಸಾಲೆ ಪದಾರ್ಥ, ವಿವಿಧ ಹಣ್ಣು ಮತ್ತು ಹೂವಿನ ಸ್ವಾದವನ್ನು ಇದು ಹೊಂದಿದ್ದು, ಪ್ರತಿಯೊಬ್ಬರೂ ಇಷ್ಟಪಡುವ ಆಯ್ಕೆಗಳಲ್ಲಿ ಚಹಾ ದೊರೆಯುತ್ತದೆ. ನೈಸರ್ಗಿಕ ಟೀ ಇದಾಗಿದ್ದು, ಅರೋಗ್ಯಕ್ಕೂ ಉತ್ತಮ ಎಂದು ಕಂಪೆನಿ ಹೇಳಿದೆ. ಬೆಲೆ ರೂಪಾಯಿ 125 ರಿಂದ ಆರಂಭ. ಮಾಹಿತಿಗೆ : 8971498865

